ಶ್ರೀ ವೈಜನಾಥ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಕೊಳಚೆ ಪ್ರದೇಶಗಳು ಎಲ್ಲಾ ಕಡೆ ದಿನೇ ದಿನೇ ಬೆಳೆಯುತ್ತಿವೆ. ಎಷ್ಟು ಬೆಳೆಯುತ್ತಿವೆಯೆಂದು ಐಡೆಂಟಿಫೈ ಮಾಡುವುದು, ಅದರ ನಂತರ ಡಿಕ್ಲೇರ್ ಮಾಡುವುದು ಅದರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ನಾವು ಹೆಚ್ಚಿನ ಹಣವನ್ನು ಕೂಡ ಈ ವರ್ಷ ಒದಗಿಸುತ್ತಿದ್ದೇವೆ. ಪರ್ ಕ್ಯಾಪಿಟಾ ಅವರಿಗೆ ಎಷ್ಟೆಷ್ಟು ಸೌಲಭ್ಯಗಳು ಸಲ್ಲಬೇಕೋ ಅದನ್ನು ಮಾಡುತ್ತೇವೆ. ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ ಚಂದ್ರಶೇಖರ ನಾಯಕ್ :- ಮಾನ್ಯ ಉಪಾಧ್ಯಕ್ಷರೇ, ನಮ್ಮ ಗೋಕಾಕ್ ತಾಲ್ಲೂಕಿನ ಮಿಲ್ಲಿನ ಸಮೀಪ ಒಂದು ಕೊಳಚೆ ಪ್ರದೇಶವಿದೆ. ಹಲವಾರು ಜನರು ಅಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಆದರೆ ಅಲ್ಲಿ ಕಂಪನಿಯವರು ನೀರು ಕೊಡಲಿಲ್ಲ ಕುಡಿಯಲಿಕ್ಕೆ, ಅದು ನಗರಾಭಿವೃದ್ಧಿಯೊಳಗೆ ಬರುವುದಿಲ್ಲ. ಗ್ರಾಮಾಂತರದಲ್ಲಿಯೂ ಬರುವುದಿಲ್ಲ ಅಂದರೆ, ಕಂಪನಿಯವರಿಗೆ ಎಷ್ಟು ಸಾರಿ ಹೇಳಿದರೂ ಅವರು ಇದುವರೆಗೆ ನೀರು ಕೊಟ್ಟಿಲ್ಲ. ಮೊನ್ನೆ ಕಾರ್ಮಿಕ ಸಚಿವರು ಬಂದು ಕಂಪನಿಯವರಿಗೆ ಈ ಮಾತನ್ನು ಹೇಳಿದ್ದಾರೆ. ಕೊಡಲಿಕ್ಕೆ ಒಪ್ಪಿಕೊಂಡು ಇದುವರೆಗೆ ಅಲ್ಲಿ ಕುಡಿಯುವ ನೀರು ಕೊಟ್ಟಿಲ್ಲ. ಅದಕ್ಕಾಗಿ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಅದನ್ನು ತಿಳಿಸಬೇಕು.

ಶ್ರೀ ವೈಜನಾಥ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ಅದು ಒಂದು ವೇಳೆ ಅದು ಅರ್ಬನ್ ಏರಿಯಾದಲ್ಲಿ ಬರುವುದು ಇದ್ದರೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಮಂತ್ರಿಗಳು ಅದರ ಬಗ್ಗೆ ವಿಚಾರಿಸಿ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಚಂದ್ರಶೇಖರ ನಾಯಕ್ :- ಅದು ಗ್ರಾಮೀಣಾಭಿವೃದ್ಧಿಯಲ್ಲಿ ಬರುವುದಿಲ್ಲ. ಅದು ಗೋಕಾಕ್ ನೋಟಿಫೈಡ್ ಏರಿಯಾ ಇದೆ.

ಶ್ರೀ ವೈಜನಾಥ ಪಾಟೀಲ್ :- ಮಾನ್ಯ ಉಪಾಧ್ಯಕ್ಷರೇ, ನಾನು ಅದರ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ :- ಧಾರವಾಡದ ಮಧ್ಯದಲ್ಲಿರುವ ಸೂಪರ್ ಮಾರ್ಕೆಟ್ ಬಗ್ಗೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 408 (785)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡದ ಪ್ರಮುಖ ನಗರ ಮಧ್ಯದ ಸೂಪರ್ ಮಾರ್ಕೆಟ್ ಸರಿಯಾಗಿ ಅಭಿವೃದ್ಧಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದ್ದಲ್ಲಿ ಅದರ ಅಭಿವೃದ್ಧಿಹಾಗೂ ಸುಸಜ್ಜಿತ ಮಾರ್ಕೆಟ್ ಮಾಡಲು ಮಹಾನಗರ ಸಭೆಯ ಮುಂದೆ ಯಾವ ಯೋಜನೆ ಇದೆ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಗಮನಕ್ಕೆ ಬಂದಿದೆ.

ಆ) ಇಲ್ಲ. ಆದರೂ ಈ ಬಗ್ಗೆ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಯು ಹುಡ್ಕೋ ಸಂಸ್ಥೆಯ ಆರ್ಥಿಕ ಸಹಾಯದಿಂದ ಸೂಪರ್ ಮಾರುಕಟ್ಟೆಯನ್ನು ಹಾಲಗೇರಿ ಕೆರೆಯಲ್ಲಿ ಕಟ್ಟಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ವಿಷಯ :- ಹಟ್ಟಿಯ ಗೋಕುಲ ಗ್ರಾಮಕ್ಕೊಂದು ವ್ಯಾಯಾಮ ಶಾಲೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 409 (3029)

ಶ್ರೀ ಜಗದೀಶ್ ಶೆಟ್ಟರ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದ ಹಟ್ಟಿಯ ಗೋಕುಲ ಗ್ರಾಮದಲ್ಲಿ ವ್ಯಾಯಾಮ ಶಾಲೆ ಕಟ್ಟಿಸಲು ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರವು ನಿರ್ಣಯ ಕೈಗೊಂಡಿರುವುದು ನಿಜವಲ್ಲವೆ ;

ಆ) ಹಾಗಿದ್ದಲ್ಲಿ, ಅದು ಇನ್ನೂ ಕಾರ್ಯಗತವಾಗದೆಯಿರಲು ಕಾರಣವೇನು ಮತ್ತು ಇನ್ನು ಎಷ್ಟು ದಿವಸಗಳಲ್ಲಿ ಅದನ್ನು ಕಾರ್ಯಗತ ಮಾಡಲಾಗುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು):-

ಅ) ಹುಬ್ಬಳ್ಳಿಯ ಗೋಕುಲ ಗ್ರಾಮದಲ್ಲಿ ವ್ಯಾಯಾಮ ಶಾಲೆ ಕಟ್ಟಿಸಲು ಪ್ರಾಧಿಕಾರವು ಯಾವುದೇ ನಿರ್ಣಯ ಕೈಗೊಂಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 413 (2997)

ಶ್ರೀ ಗಂಗಾಧರ ನಾಯಕ್ (ಮಾನ್ವಿ) :- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾನ್ವಿ ಪಟ್ಟಣಕ್ಕೆ ಕಾತುಕಿ ಗ್ರಾಮದ ಹತ್ತಿರ ಇರುವ ತುಂಗಭದ್ರಾ ನದಿಯಿಂದ ಕುಡಿಯುವ ನೀರಿನ ಯೋಜನೆಯ ಕಾಮಗಾರಿ ಪ್ರಾರಂಭವಾಗಿ 3-4 ವರ್ಷಗಳು ಆಗಿದ್ದರು ಕೆಲಸ ಪ್ರಾರಂಭವಾಗದೆ ಮಾನ್ವಿ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆ ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?